ಮಾನ್ಯ ಜಮಖಂಡಿ ಶಾಸಕರ ಕೋರಿಕೆಯ ಮೇರೆಗೆ ಈ ಹಿಂದೆ ದಿ:9.5.2005ರಿಂದ ಜಮಖಂಡಿಗೆ ಹೊಸ ರಾಜಹಂಸ ಸಾರಿಗೆಯನ್ನು ವಿಶೇಷ ಪ್ರೋತ್ಸಾಹಕ ಪ್ರಯಾಣ ದರದ ಅಡಿಯಲ್ಲಿ ಪ್ರಾರಂಬಿಸಲಾಯಿತು, ಆದರೆ ಸದರಿ ಸಾರಿಗೆಯಿಂದ ನಿರೀಕ್ಷಿತ ಆದಾಯ ಸಂದಾಯವಾಗದೆ ಇರುವುದರಿಂದ ನಷ್ಟ ಉಂಟಾಗುವುದನ್ನು ಗಮನಿಸಿ ದಿ:13.9.2005ರಿಂದ ಈ ಮಾರ್ಗವನ್ನು ರದ್ದು ಪಡಿಸಲಾಯಿತು. ಕಾರಣ ನಿರೀಕ್ಷಿತ ಆದಾಯ ಬಾರದೆ ಇರುವ ಹಿನ್ನಲೆಯಲ್ಲಿ ವೊಲ್ವೋ ಸಾರಿಗೆಯನ್ನು ಪ್ರಾರಂಬಿಸಲಾಗಿರುವುದಿಲ್ಲ.

ಏ) ಎಂದಿನಿಂದ ಓಲ್ವೋ ಬಸ್ ಪ್ರಾರಂಭಿಸಲಾಗುವುದು?

ಈ ಸಾಲಿನ ಮೇ ತಿಂಗಳ ಕೊನೆಯ ವಾರದಿಂದ ಜಮಖಂಡಿಯಿಂದ ಬೆಂಗಳೂರಿಗೆ ಹೊಸ ಎ.ಸಿ. ಮೇಘದೂತ ಸಾರಿಗೆಯನ್ನು ಪ್ರಾರಂಭಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1168(1525)
ಮಾನ್ಯ ಸದಸ್ಯರ ಹೆಸರು: ಶ್ರೀ. ಸಿದ್ದು ಸಾವದಿ (ಜಮಖಂಡಿ)
ಉತ್ತರಿಸುವ ಸಚಿವರು: ಶ್ರೀ. ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಜಮಖಂಡಿ ಮಧ್ಯಭಾಗದಲ್ಲಿರುವ ಬಿಜಾಪೂರ–ಲೋಕಾಪೂರ ರಾಜ್ಯ ಹೆದ್ದಾರಿಯನ್ನು ಯಾವ ಅನುದಾನದಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಇದು ಎಷ್ಟು ಕಿಲೋಮೀಟರ್ ಇದೆ;

ಈ ರಸ್ತೆಯನ್ನು ವಿಶ್ವಬ್ಯಾಂಕಿನ ಸಾಲ (4606)ದ ನೆರವಿನ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. (ಈ ರಸ್ತೆಯು 55.63 ಕಿಮೀ. ಇರುತ್ತದೆ.)

ಆ) ಜಮಖಂಡಿ ನಗರದ ಮಧ್ಯ ಭಾಗದಲ್ಲಿ ಹಾಯ್ದುಹೋಗುವ ಈ ರಸ್ತೆಗೆ ಡ್ರೈನೇಜ್ ಮಾಡಲಾಗುವುದೇ;

ಸುಮಾರು 310ಮೀ. ಉದ್ದದ ಡ್ರೈನೇಜ್ ಮಾಡಲಾಗುವುದು

ಇ) ಹಾಗಿದ್ದಲ್ಲಿ ಇದನ್ನು ಎಸ್ಟಿಮೇಟಿನಲ್ಲಿ ಸೇರಿಸದಿರಲು ಕಾರಣಗಳೇನು;

ಅನ್ವಯಿಸುವುದಿಲ್ಲ.

ಈ) ಇದರ ಟೆಂಡರ್ ಅವಧಿ ಎಷ್ಟು ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು?

ಇದರ ಟೆಂಡರ್ ಅವಧಿಯು 30 ತಿಂಗಳಾಗಿದ್ದು, ಕಾಮಗಾರಿಯನ್ನು 30–06–2007ರ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.